ದಿನಾಂಕ: 30.09.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಎದುರುದಾರರ ಪರ ಶ್ರೀ ಎಂ ವಿ ವಕೀಲರಿಂದಃ**

ನನ್ನ ಅಣ್ಣ ಇಂಜಂಕ್ಷನ್ ಆದೇಶವಾಗಿದ್ದರೂ ಸಹ ಬೇರೆಯವರಿಗೆ ಜಮೀನು ಮಾರಾಟ ಮಾಡಿದ್ದರಿಂದ ಈ ಅರ್ಜಿಯನ್ನು ಸಲ್ಲಿಸಿದ್ದೇವೆ. ನಮ್ಮ ಕುಟುಂಬದ ಮೂಲ ಪುರುಷ ನನ್ನ ತಾತ ಗಿರಿಯಣ್ಣ. ಗಿರಿಯಣ್ಣನಿಗೆ ಒಬ್ಬನೇ ಮಗ. ಅವರ ಹೆಸರು ಎಸ್ ಟಿ ಬಸಣ್ಣ. ಮಲ್ಲಮ್ಮ ನನ್ನ ಅಣ್ಣನ ಹೆಂಡತಿ ಅಂದರೆ ಅತ್ತಿಗೆಯಾಗಬೇಕು. ಮಲ್ಲಮ್ಮ ಬದುಕಿದ್ದಾರೆ. ಬಸಣ್ಣ ಮೃತ ಪಟ್ಟಿದ್ದಾನೆ. ಬಸಣ್ಣ ಮೃತ ಪಟ್ಟು 5-6 ವರ್ಷಗಳಾಗಿದೆ. ಬಸಣ್ಣನಿಗೆ ಇಬ್ಬರು ಹೆಂಡತಿಯರು. ಮೊದಲನಹೆಂಡತಿ ಶಾಂತಮ್ಮ 2 ನೇ ಹಂಡತಿ ನನ್ನ ಅಮ್ಮ ಸಾವಿತ್ರಮ್ಮ ಶಾಂತಮ್ಮನಿಗೆ 4 ಜನ ಮಕ್ಕಳು. ಅವರ ಹೆಸರು ಹೆಸ್ ಬಿ ಮಂಜುನಾಥ, ಅಂಬುಜಾಕ್ಷಿ , ನೇತ್ರಾವತಿ ಮತ್ತು ಭುವನೇಶ್ವರಿ. ನೇತ್ರಾವತಿ ಮೃತ ಪಟ್ಟಿದ್ದಾರೆ. ನನ್ನ ತಾಯಿ ಸಾವಿತ್ರಮ್ಮಗೆ ಇಬ್ಬರು ಮಕ್ಕಳು ನನ್ನ ಅಕ್ಕ ಗೀತಾ ಮತ್ತು ನಾನು.

ಆಸ್ತಿಯನ್ನು ಕೊಡಬೇಕು ಎಂದು ನನ್ನ ಅಣ್ಣನ ಮೇಲೆ ಓಸ್ 8/2020 ಎಂಬ ದಾವೆಯನ್ನು ಸಲ್ಲಿಸಿದ್ದೇನೆ. ದಾವೆಯ ಸರ್ವೆ ನಂಬರ್ 71, 72 ರ ಮೇಲೆ ತಾತ್ಕಾಲಿಕ ನಿರ್ಭಂಧಕಾಜ್ಞೆ ನೀಡಿದ್ದರೂ ಸಹ ಮಾರಾಟ ಮಾಡಿರುತ್ತಾರೆ. ಶಾಂತಮ್ಮ ಮೃತ ಪಟ್ಟ ನಂತರ ನನ್ನ ತಾಯಿಯನ್ನು ಮದುವೆಯಾಗಿದ್ದರು. 16.09.1989 ರಲ್ಲಿ ವಿಭಾಗವಾಗಿದ್ದಾರೆ ಎಂದರೆ ಸರಿಯಲ್ಲ. ವಿಭಾಗವಾದ ನಂತರ ಅವರವರ ಸ್ವಾಧೀನಾನುಭವದಲ್ಲಿ ಅವರವರೇ ಅನುಭವಿಸಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು